ಪೆಗ್ಗು ವಿಸ್ಕಿ ಒಳಗಿಳಿಯಿತು. ಮದ್ಯ ಚಿಂತೆಯನ್ನು ದೂರ ಮಾಡಲಿಲ್ಲ. ಎಲ್ಲ ಯೋಚನೆಗಳನ್ನು ಹೊತ್ತೇ ತಡವಾಗಿ ಲಾಡ್ಜಿಗೆ ಮರಳಿದ ರೋಹಿತ್.

ಲಿಫ್ಟಿನಿಂದ ಈಚೆ ಬರುತ್ತಲೇ ಥಾಮಸ್ ಕಾಣಿಸಿದ. ಗುಡ್ ಈವಿನಿಂಗ್ ಹೇಳಿದ. ''ಹೋಗಿದ್ದ ಕೆಲಸ ಆಯಿತೇ?'' ಎಂದು ಕೇಳಿದ. ರೋಹಿತ್ ಮುಖ ನೋಡಿ ''ತುಂಬಾ ಡಲ್ ಆಗಿದ್ದೀರಲ್ಲಾ ಸಾರ್? ಹೆಚ್ಚಿಗೆ ಯೋಚಿಸಬೇಡಿ ಸಾರ್. ಯೋಚ್ನೆ ಮಾಡೋದ್ರಿಂದ ಯಾವ ಸಮಸ್ಯೇನೂ ಪರಿಹಾರವಾಗೊಲ್ಲ. ಆತ್ಮಹತ್ಯೆ ಸಮಸ್ಯೆಗಳಿಗೆ ಪರಿಹಾರವಲ್ಲ'' ಉಪದೇಶಿಸುವಂತೆ ಹೇಳಿದ.

ಥಾಮಸ್ ಮಾತಿನಲ್ಲಿ ಆಸಕ್ತಿ ತೋರದೆ ರೋಹಿತ್ ರೂಮನ್ನು ಪ್ರವೇಶಿಸಿದ. ತಲೆ ಸಿಡಿಯುತ್ತಿತ್ತು. ಒಂದು ಲೋಟ ಕಾಫಿ ಕುಡಿದರೆ ಸ್ವಲ್ಪ ಉತ್ತಮವಾಗಬಹುದು ಎನ್ನಿಸಿ ಬೆಲ್ ಮಾಡಿದ. ತಕ್ಷಣವೇ ಥಾಮಸ್ ಬಾಗಿಲು ಬಡಿದ. ಆ ವೇಗ ನೋಡಿದರೆ ಅವನು ಬಾಗಿಲ ಬಳಿಯೇ ನಿಂತಿದ್ದನೇನೋ ಅನಿಸಿತು. ಬಾಗಿಲು ತೆರೆದು ಕಾಫಿಗೆ ಹೇಳಿ ವಾಪಸ್ಸು ಬಂದು ಹಾಸಿಗೆಯ ಮೇಲೆ ಕೂತ ರೋಹಿತ್ ಟೀವಿ ಆನ್ ಮಾಡಿದ. ಮತ್ತೆ ಅದೇ ಸುದ್ದಿ! ಆತ್ಮಹತ್ಯೆ ಮಾಡಿಕೊಂಡ ಪೊಲೀಸ್ ಅಧಿಕಾರಿಯದು! ಆಡಳಿತದವರು ಅದರಲ್ಲಿ ತಮ್ಮ ಪಾತ್ರವೇನೂ ಇಲ್ಲ ತಾವು ರಾಜೀನಾಮೆ ಕೊಡುವ ಪ್ರಶ್ನೆಯೇ ಇಲ್ಲ ಎಂದು ವಾದಿಸುತ್ತಿದ್ದರು ಆಡಳಿತಾರೂಢರು. ವಿಸ್ಕಿಯ ಪರಿಣಾಮ ಟೀವಿಯ ಮೇಲೆ ಗಮನ ಕೇಂದ್ರೀಕರಿಸಲಾಗಲಿಲ್ಲ! ಓ... ಷಿಟ್ ಎಂದು ಟೀವಿ ಆಫ್ ಮಾಡಿದ.

ಕಾಫಿ ತಂದವನು ಥಾಮಸ್ ಅಲ್ಲ, ಬೇರೊಬ್ಬ. ಅವನು ಹಿಂತಿರುಗುತ್ತಲೇ ಥಾಮಸ್ ಕಾಣಿಸಿಕೊಂಡ.

"ಇವತ್ತು ಅಮಾವಾಸ್ಯೆ ಸಾರ್" ಎಂದ.

"ಹೌದೆ? ಅದರಲ್ಲೇನು ವಿಶೇಷ?"

"ಈ ರೂಮು ಸಾರ್."

"ಇಲ್ಲೇನು ವಿಶೇಷ?"

"ಇಲ್ಲಿ ಆತ್ಮಹತ್ಯೆ ಮಾಡಿಕೊಂಡವನ ದೆವ್ವದ ಬುದ್ಧಿ ಸ್ಥಿಮಿತದಲ್ಲಿ ಇರೋಲ್ಲ"

"ನೀನು ಆ ದೆವ್ವದ ವಿಷಯ ಬಿಟ್ಟೇ ಇಲ್ಲ! ಅದಕ್ಕೆ ಬುದ್ಧಿ ಬೇರೆ ಇರೊತ್ತೋ? ಶರೀರ ಇಲ್ಲದ ದೆವ್ವಕ್ಕೆ ಬುದ್ಧಿ ಬೇರೆ ಎಲ್ಲಿರುತ್ತೆ?" ರೋಹಿತ್ ತೊದಲುತ್ತ ನಕ್ಕ.

"ತಮಾಷೆಯಲ್ಲ ಸಾರ್. ನಿಮ್ಮ ಒಳ್ಳೇದಕ್ಕೆ ಹೇಳ್ತಿದ್ದೀನಿ. ರೂಮು ಬದಲಾಯಿಸಿಬಿಡಿ, ಇಲ್ಲಾ ಲಾಡ್ಜ್ ಖಾಲಿ ಮಾಡ್ಬಿಡಿ."

"ಏನು ಥಾಮಸ್? ಸಲುಗೆ ಕೊಟ್ರೆ ಹೆದ್ರಿಸ್ತಿದ್ದೀಯ?"

"ಸಾರಿ ಸರ್, ನಾನು ನಿಮ್ಮನ್ನ ಖಂಡಿತಾ ಹೆದ್ರಿಸ್ತಿಲ್ಲ. ನಿಮಗೆ ಒಳ್ಳೆಯದಾಗಲೀಂತ ಹೇಳ್ತಿದ್ದೀನಿ,"

"ಸರಿ. ನನ್ನ ಕೆಲಸವೂ ಆಗ್ಲಾ ಇಲ್ಲ. ಇಲ್ಲಿದ್ದು ಏನೂ ಪ್ರಯೋಜನವೂ ಇಲ್ಲ. ಒಳ್ಳೆ ಐಡಿಯಾ ಕೊಟ್ಟೆ."

"ಆದಷ್ಟು ಬೇಗನೆ ಹೊರಟುಬಿಡಿ ಸಾರ್" ಎಂದ ಥಾಮಸ್ ಬಾಗಿಲು ಹಾಕಿಕೊಂಡು ಆಚೆ ಹೋದ.

ಕಾಫಿ ಕುಡಿದ ಮೇಲೆ ತಲೆ ನೋವು ಸ್ವಲ್ಪ ಶಮನವಾದಂತಾಯಿತು. ಥಾಮಸ್ ಹೇಳುವುದರಲ್ಲೂ ವಿವೇಕ ಇದೆ ಅನ್ನಿಸಿತು. ಅದು ದೆವ್ವದ ಬಗೆಗಲ್ಲ. ಇಲ್ಲಿ ಕೆಲಸ ಆಗ್ತಿಲ್ಲ